ಪ್ರಧಾನ **ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ** ದಲ್ಲಿ, **ಸಾಗರ**

**ಸಿ.ಸಿ.ನಂ.2051/2025.**

**ಪಿರ್ಯಾದಿ** :- ಕೃಷಿಕ್ ಸೌಹಾರ್ದ ಸಹಕಾರಿ ಸಂಘ ನಿಯಮಿತ,
ಆಶ್ರಯ ಅರ್ಕೇಡ್, 1 ನೇ ಮಹಡಿ,
ಮಾರ್ಕೆಟ್ ರಸ್ತೆ,
ಸಾಗರ ಟೌನ್,
ಇದರ ಪರ ಸಿ.ಇ.ಓ.,
ಸಮರ್ಥ್ ಎಂ.ಎಲ್,
8050150589.

**-ವಿರುದ್ದ-**

**ಆರೋಪಿ** :- ಇಮ್ತಿಯಾಜ್ ಬಾಷಾ ಬಿನ್
ಹಿದಾಯತ್ ಬಾಷಾ,
ಎಲ್.ಐ.ಸಿ ಕಛೇರಿ ಹತ್ತಿರ,
1 ನೇ ಕ್ರಾಸ್, ಜಿ.ಪಿ.ರಸ್ತೆ,
ಸಾಗರ ಟೌನ್.

ಭಾರತ ದಂಡ ಪಕ್ರಿಯಾ ಸಂಹಿತೆ ಕಲಂ. 313 ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರಶ್ನೆ1: ನೀವು ಈ ಕೇಸಿನಲ್ಲಿ ಪಿರ್ಯಾದುದಾರರ ಪರ ಮಾಡಿರುವ ಸಾಕ್ಷಿಗಳ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ:

ಪ್ರಶ್ನೆ2: ಪ್ರಾ.ಸಾ.1 ಸಮರ್ಥ್ ಎಂ.ಎಲ್ ಇವರು ಮುಖ್ಯ ವಿಚಾರಣೆ **ಸಾಕ್ಷ್ಯದಲ್ಲಿ,** ಆರೋಪಿಯಾದ ನೀವು ನಿಮ್ಮ ಗೃಹಕೃತ್ಯದ ಅಡಚಣೆ ನಿವಾರಿಸುವ ಸಲುವಾಗಿ ಪಿರ್ಯಾದುದಾರ ಸಂಸ್ಥೆಯಿಂದ ರೂ.1,00,000-00 (ಒಂದು ಲಕ್ಷ ರೂಪಾಯಿ)ಗಳನ್ನು ದಿನಾಂಕ:19.03.2017 ರಂದು ಸಾಲವಾಗಿ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರ:-

ಪ್ರಶ್ನೆ3: ಪ್ರಾ.ಸಾ.1 ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆ **ಸಾಕ್ಷ್ಯದಲ್ಲಿ,** ಆರೋಪಿಯಾದ ನೀವು ಸದರಿ ಸಾಲವನ್ನು ಬಡ್ಡಿಯೊಂದಿಗೆ ಮರುಪಾವತಿ ಮಾಡುವುದಾಗಿ ಒಪ್ಪಿರುತ್ತಾರೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರ:-

ಪ್ರಶ್ನೆ4ಃ ಪ್ರಾ.ಸಾ.1 ಅವರು ಮುಂದುವರೆದ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ಸಕಾಲದಲ್ಲಿ ಸದರಿ ಸಾಲದ ಹಣವನ್ನು ಹಿಂದಿರುಗಿಸದೇ ಇದ್ದಾಗ ಪಿರ್ಯಾದುದಾರರು ಸಾಲದ ಹಣವನ್ನು ಮರುಪಾವತಿಸುವಂತೆ ಪದೇ ಪದೇ ಕೇಳಿದಾಗ ಆರೋಪಿಯಾದ ನೀವು ದಿನಾಂಕಃ05.06.2024 ರಂದು ತಾವು ಖಾತೆ ಹೊಂದಿರುವ ಆಕ್ಸಿಸ್ ಬ್ಯಾಂಕ್, ಅಶೋಕ ರಸ್ತೆ ಶಾಖೆ, ಸಾಗರ ಚೆಕ್ ಸಂಖ್ಯೆ.052171 ರ ಮೇಲೆ ರೂ.2,48,000-00(ಎರಡು ಲಕ್ಷದ ನಲವತ್ತೆಂಟು ಸಾವಿರ ರೂಪಾಯಿ) ಗಳನ್ನು ನಮೂದಿಸಿ, ಚೆಕ್ ಗೆ ಸಹಿ ಮಾಡಿ ನಗದು ಮಾಡಿಕೊಳ್ಳುವಂತೆ ಪಿರ್ಯಾದುದಾರರಿಗೆ ನೀಡಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ5ಃ ಪ್ರಾ.ಸಾ.1 ಅವರು ಮುಂದುವರೆದ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಆರೋಪಿ ನೀಡಿದ ಸದರಿ ಚೆಕ್ ನ್ನು ಪಿರ್ಯಾದುದಾರರು ದಿನಾಂಕಃ10.06.2024 ರಂದು ತಾವು ಖಾತೆ ಹೊಂದಿರುವ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಸಾಗರ ಶಾಖೆಯ ಮುಖಾಂತರ ನಗದೀಕರಿಸಿಕೊಳ್ಳಲು ಸಲ್ಲಿಸಿದಾಗ "ಅಕೌಂಟ್ಸ್ ಕ್ಲೋಸಡ್" ಎಂಬ ಷರಾದೊಂದಿಗೆ ವಾಪಸ್ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ6ಃ ಪ್ರಾ.ಸಾ.1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಈ ಬಗ್ಗೆ ಪಿರ್ಯಾದುದಾರರು ಆರೋಪಿಗೆ ತಮ್ಮ ವಕೀಲರಿಂದ ದಿನಾಂಕಃ03.07.2024 ರಂದು ನೊಂದಣಿ ಅಂಚೆ ಮೂಲಕ ನೋಟೀಸನ್ನು ಕಳುಹಿಸಿದ್ದು, ಸದರಿ ನೋಟಿಸ್ ಬಗ್ಗೆ ಆರೋಪಿ ವಿಳಾಸಕ್ಕೆ ತಿಳಿಸಿದರೂ ಕೂಡ, Left Without instructions ಎಂಬ ಷರಾದೊಂದಿಗೆ ವಾಪಾಸ್ಸು ಪಿರ್ಯಾದುದಾರರ ವಕೀಲರಿಗೆ ವಾಪಾಸ್ಸು ಬಂದಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ-

ಪ್ರಶ್ನೆ7ಃ ಪ್ರಾ.ಸಾ.1 ರವರು ಮುಂದುವರೆದು ತಮ್ಮ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ನಿಗದಿತ ಅವಧಿಯೊಳಗೆ ಸದರಿ ಚೆಕ್ಕಿನಲ್ಲಿ ಹೇಳಿರುವ ಹಣವನ್ನು ಪಾವತಿ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ8ಃ ಪ್ರಾ.ಸಾ.1 ರವರು ಮುಂದುವರೆದು ಆದ್ದರಿಂದ ನೀವು ನೆಗೋಷಿಯೇಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆ ಕಲಂ 138 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ9ಃ ಪ್ರಾ.ಸಾ.1 ರವರು ತಮ್ಮ ಮುಂದುವರೆದ ಮುಖ್ಯ ವಿಚಾರಣೆ ಸಾಕ್ಷ್ಯದಲ್ಲಿ ಆರೋಪಿ ನೀಡಿದ ಮೂಲ ಚೆಕ್ ನ್ನು ನಿಶಾನೆ ಪಿ.1 ಎಂದು, ಅದರ ಮೇಲಿರುವ ಆರೋಪಿಯ ಸಹಿಯನ್ನು ನಿಶಾನೆ ಪಿ.1(ಎ) ಎಂದು, ಹಿಂಬರವನ್ನು ನಿಶಾನೆ ಪಿ.2 ಎಂದು, ಕಾನೂನುಬದ್ಧ ನೋಟಿಸನ್ನು ನಿಶಾನೆ ಪಿ.3 ಎಂದು, ಜಾರಿಯಾಗದೇ ವಾಪಸ್ಸು ಬಂದಿರುವ ಅಂಚೆ ಲಕೋಟೆಯನ್ನು ನಿಶಾನೆ ಪಿ.4 ಎಂದು, ಅದರಲ್ಲಿನ ನೋಟಿಸಿನ ಪ್ರತಿಯನ್ನು ನಿಶಾನೆ ಪಿ.4(ಎ) ಎಂದು, ಅಧಿಕಾರ ಪತ್ರವನ್ನು ನಿಶಾನೆ ಪಿ.5 ಎಂದು ಗುರುತಿಸಿರುವುದಾಗಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ10ಃ ನಿಮ್ಮ ಪರ ಯಾರಿಗಾದರೂ ಸಾಕ್ಷಿ ಮಾಡಿಸುತ್ತೀರಾ?

ಉತ್ತರಃ

ಪ್ರಶ್ನೆ11ಃ ನೀವು ಹೆಚ್ಚಿಗೆ ಏನಾದರೂ ಹೇಳುವುದು ಇದೆಯಾ?

ಉತ್ತರಃ

(ದಿಃ29.01.2026 ರಂದು ಮೇಲ್ಕಂಡ ಹೇಳಿಕೆಯು ಆರೋಪಿಯಿಂದ ನೀಡಲ್ಪಟ್ಟಿದ್ದು ನಿಜವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸಿದೆ)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಸಾಗರ.